



ಕಲಾವಿದ ಎಲ್.ಎನ್. ತಲ್ಲೂರ್



‘ರಿಕರೆಂಟ್ ನ್ಯೂರಲ್ ನೆಟ್‌ವರ್ಕ್’ ಕಲಾಕೃತಿ

ನಾವಿಬ್ಬರೂ ಆ ದೀಪದ ಮುಂದೆ ನಿಂತಿದ್ದೆವು.
ದೀಪ ಅಂದರೆ ದೀಪ, ಅಲ್ಲ ಅಂದರೆ ಅಲ್ಲ.

***

ಅಲ್ಲ ಅಂದರೆ ಇನ್ನೇನು...? ಎಂದು ಯೋಚಿಸುತ್ತಾ ನಿಂತೆ. ಆ ಶಿಲ್ಪಕ್ಕೆ ಕೊಟ್ಟಿದ್ದ ಹೆಸರು ‘ಡೇಟಾ ಮೈನಿಂಗ್’ –ಪಕ್ಕಾ ಸಾಂಪ್ರದಾಯಿಕವಾದ ದೀಪದ್ದೇ ಆಕಾರ.

ಆದರೆ ಇದಕ್ಕೆ ‘ಡೇಟಾ ಮೈನಿಂಗ್’ ಅಂತ ಹೆಸರು ಕೊಟ್ಟಿದ್ದೇ ಕಷ್ಟಕ್ಕೆ ಬಂದಿತ್ತು. ನಾನು ಆ ಶಿಲ್ಪದ ಸುತ್ತಲೂ ಹಲವು ಬಾರಿ ಸುತ್ತುತ್ತಲೇ ಇದ್ದೆ. ಜೊತೆಯಲ್ಲಿದ್ದದ್ದು ಅದರ ರೂವಾರಿ ಕಲಾವಿದ ತಲ್ಲೂರ್ ಎಲ್.ಎನ್. ಅವರು.

***

ಕಲೆ ಮತ್ತು ಛಾಯಾಗ್ರಹಣಕ್ಕೆಂದೇ ಬೆಂಗಳೂರಿನಲ್ಲಿ ಹೊಚ್ಚ ಹೊಸ ಸಂಗ್ರಹಾಲಯ ಆರಂಭವಾಗಿದೆ. ಬೆಂಗಳೂರಿನ ಮ್ಯೂಸಿಯಂಗಳ ತವರಾದ ಕಸ್ತೂರಬಾ ರಸ್ತೆಯಲ್ಲಿಯೇ ಈ ಹೊಸ ಸಂಗ್ರಹಾಲಯ ಶುರುವಾಗಿದೆ. ‘ಮ್ಯೂಸಿಯಂ ಆಫ್ ಆರ್ಟ್ ಅಂಡ್ ಫೋಟೊಗ್ರಫಿ’ (ಎಂಎಪಿ–ಮ್ಯಾಪ್) ತನ್ನ ಆರಂಭದ ಪ್ರದರ್ಶನಕ್ಕೆ ಆಹ್ವಾನ ಕೊಟ್ಟದ್ದು ಈಗಾಗಲೇ ಜಗತ್ತಿನೆಲ್ಲೆಡೆ ಹೆಸರಾಗಿರುವ ಕಲಾವಿದ ಲಕ್ಷ್ಮೀನಾರಾಯಣ ತಲ್ಲೂರು ಅರ್ಥಾತ್ ತಲ್ಲೂರು ಎಲ್.ಎನ್. ಅವರನ್ನು

ಎರಡು ಮಹತ್ವದ ದೀಪಗಳು ಈ ಮ್ಯೂಸಿಯಂನ ಸಂಗ್ರಹದೊಳಗೆ ಸೇರಿವೆ. ಒಂದು ದೀಪ ಲಕ್ಷ್ಮಿ, ಇನ್ನೊಂದು ಕಿನ್ನರ ಆರತಿ. ಮ್ಯೂಸಿಯಂನ ಸಂಸ್ಥಾಪಕರು, ‘18ನೇ ಶತಮಾನದ ಈ ದೀಪಗಳಿಗೆ ನಿಮ್ಮ ಕಲಾಕೃತಿಗಳ ಮೂಲಕ ಪ್ರತಿಕ್ರಿಯಿಸಬಾರದೇಕೆ’ ಎಂದು ಕೇಳಿದರು. ತಲ್ಲೂರು ಅವರು 18ನೆಯ ಶತಮಾನವನ್ನು ಈ ಕಾಲಮಾನದ ಜೊತೆಗೆ ಬೆಸುಗೆ ಹಾಕಿದರು. ಆಗ ಬೆಳಕು ಕೊಡುತ್ತಿದ್ದ ‘ದೀಪ’ ಈಗ ಬೆಳಕು ಕೊಡುತ್ತಿರುವ ‘ಡೇಟಾ ದೀಪ’ವಾಗಿ ಮಾರ್ಪಾಟಾಗಿತ್ತು.

ನಾನು ನಿಂತದ್ದು ಆ ‘ಡೇಟಾ ಮೈನಿಂಗ್’ ಎಂದು ಹೆಸರಿಟ್ಟುಕೊಂಡಿದ್ದ, ಡೇಟಾದ ಮೂಲಕವೇ ನಮ್ಮ ಇಂದಿನ ಹಾಗೂ ಮುಂದಿನ ಬದುಕನ್ನು ಬೆಳಗಲು ಸಜ್ಜಾಗುತ್ತಿದ್ದ ಈಗಿನ ದೀಪದ ಎದುರು.

ತಲ್ಲೂರು ಅವರ ಜೊತೆಗೆ ಮಾತಿಗೆ ನಿಂತೆ. ಅವರು ಆ ದೀಪವನ್ನು ಸೂಕ್ಷ್ಮವಾಗಿ ನೋಡುವಂತೆ ತಿಳಿಸಿದರು. ಆ ದೀಪಕ್ಕೊಂದು ವಿಶೇಷವಿತ್ತು. ಅದು ಪ್ಲೈವುಡ್‌ನಿಂದ ರೂಪಿಸಿದ ದೀಪ. ಗಾಢವಾಗಿ ನೋಡುತ್ತಾ ಹೋದಂತೆ ಅದು ನೂರಾರು ಪ್ಲೈವುಡ್‌ಗಳನ್ನೂ ಜೋಡಿಸಿ ರೂಪಿಸಿದ ಶಿಲ್ಪವಾಗಿತ್ತು. ನಾನು ಇನ್ನೂ ಬೆರಗುಗಣ್ಣಿನಿಂದ ಅದನ್ನು ನೋಡುತ್ತಲೇ ಇದ್ದೆ. ಆಗಲೇ ತಲ್ಲೂರು ಹೇಳಿದ್ದು. ‘ಇಲ್ಲಿ